**DW-2** OS193/2018

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಅಸಲು ದಾವೆ. ಸಂಖ್ಯೆ:193/2018**

**ಡಿ .ಡಬ್ಲೂ೦2 ಶ್ರೀ ಶಿವರಾಮರೆಡ್ಡಿ**

**ಸಾಕ್ಷಿಯನ್ನು ದಿನಾಂಕಃ 20-02-2026 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲು ಃ ವಾದಿಯ ಪರ ಶ್ರೀ.ಎನ್ ಎಸ್ ವಕೀಲರಿಂದ**

1. ಈ ದಾವೆಯ ವಾದಿಯವರು ಎವಲಿನ್ ಎಲಿಜಿಬತ್ ಅಪ್ಲೆಟಾನ್ ರವರ ಮಕ್ಕಳು ಎಂದರೆ ಸರಿ. ಈ ದಾವೆಯನ್ನು ವಾದಿಯವರು ಸರ್ವೆ ನಂ.51/2 ವಿಸ್ತೀರ್ಣ 3 ಎಕರೆ 10 ಗುಂಟೆಗೆ ಸಂಬಂದ ಪಟ್ಟಂತೆ ಹೂಡಿರುತ್ತಾರೆ. ದಾವಾ ಆಸ್ತಿಯಾದ ಸರ್ವೆ ನಂ.51/2 ಮೂಲತಃ ವಾದಿಯವರ ತಾಯಿಯವರಾದ ಎವಲಿನ್ ಎಲಿಜಿಬತ್ ಅಪ್ಲೆಟಾನ್ ರವರಿಗೆ ಸೇರಿದ್ದು ಎಂದರೆ ಸಾಕ್ಷಿಯು ಮೊದಲು ನನ್ನ ತಂದೆಯವರಿಗೆ ಗೊತ್ತಿದೆ ಎಂದು ಹೇಳಿ ನಂತರ ಸರಿ ಎನ್ನುತ್ತಾರೆ. ಸದರಿ ದಾವಾ ಆಸ್ತಿಯನ್ನು ಎವಲಿನ್ ಎಲಿಜಿಬತ್ ಅಪ್ಲೆಟಾನ್ ರವರು 1940 ನೇ ಸಾಲಿನಲ್ಲಿ ಪಾಪಿರೆಡ್ಡಿ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾದಿಯವರ ತಾಯಿಯವರಾದ ಎವಲಿನ್ ಎಲಿಜಿಬತ್ ಅಪ್ಲೆಟಾನ್ ರವರ ಹೆಸರಿನಲ್ಲಿ ಇರುವ ಪಹಣಿಗಳನ್ನು ನಿಡಿ6 ರಿಂದ 11 ರಂತೆ ನಾನು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ.

2. ನನ್ನ ಪ್ರಕಾರ ಸದರಿ ದಾಖಲೆಗಳಲ್ಲಿ ಎಲಿಜಬತ್ ನನ್ನ ತಂದೆಯವರಿಗೆ ದಾಖಲೆಯನ್ನು ಮಾಡಿಕೊಟ್ಟ ಎಲಿಜಬತ್ ಆಗಿರುತ್ತಾರೆ. ನನ್ನ ಪ್ರಕಾರ ನಿಡಿ1 ರಲ್ಲಿ ನಮೂದಾಗಿರುವ ಎಲಿಜಬತ್ ಕೋಂ ಜಯಪಾಲ್ ಆಗಿರುತ್ತದೆ ಎಂದರೆ ಹೌದು. ಸದರಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಯಾವ ಆದಾರದ ಮೇಲೆ ಅವರ ಹೆಸರಿಗೆ ಬಂದಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿದೆಯಾ ಎಂದರೆ ಇಲ್ಲ, ಸಾಕ್ಷಿ ಮುಂದುವರೆದು ನನ್ನ ತಂದೆಯವರಿಗೆ ಗೊತ್ತಿದೆ ಎನ್ನುತ್ತಾರೆ. ಈ ದಾವೆಯನ್ನು ವಾದಿಯವರು ಹೂಡಿದ ನಂತರ ನನ್ನ ಪ್ರಕಾರ ನಿಡಿ1 ನ್ನು ನನ್ನ ತಂದೆಯವರಿಗೆ ಬರೆದುಕೊಟ್ಟ 1 ನೇ ಪ್ರತಿವಾದಿಗೆ ಅದು ಯಾವ ರೀತಿ ಬಂತು, ಕ್ರಯ ಪತ್ರದ ಮೂಲಕ, ಮಂಜೂರುರಾತಿ ಮೂಲಕ, ಅಥವಾ ಬೇರೆ ಯಾವುದಾದರೂ ನೊಂದಾಯಿತ ದಾಖಲೆಯ ಮೂಲಕ ಆಗಿದೆಯಾ ಎಂದು ವಿಚಾರಿಸಿದ್ದೇನಾ ಎಂದರೆ ಇಲ್ಲ. ಸದರಿ ನಿಡಿ1 ರ ಆದಾರದಲ್ಲಿ ನನ್ನ ತಂದೆಯವರ ಹೆಸರಿಗೆ ದಾವಾ ಆಸ್ತಿಯ ಖಾತೆ ಬದಲಾವಣೆ ಆಗಿದೆ ಎಂದರೆ ಇರಬಹುದು.

3. ನನ್ನ ಪ್ರಮಾಣ ಪತ್ರದಲ್ಲಿ ನಿಡಿ1 ಕ್ರಯ ಪತ್ರವನ್ನು ಮಾಡುವ ಮೊದಲೇ ದಾವಾ ಆಸ್ತಿಯ ಸ್ವಾದೀನತೆಯನ್ನುನಮ್ಮ ಪ್ರಕಾರ ನಾವೇ ಹೊಂದಿದ್ದೇವೆ ಎಂದು ಹೇಳಿರುತ್ತೇವೆ ಎಂದರೆ ಹೌದು. ನಿಡಿ1 ನ್ನು ಮಾಡುವ ಮೊದಲು ಆ ರೀತಿ ಆಗಿದ್ದರೆ ಬೇರೆ ಯಾವ ದಾಖಲೆಯ ಮೂಲಕ ನನ್ನ ತಂದೆಯವರಿಗೆ ದಾವಾ ಆಸ್ತಿ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ನನ್ನ ತಂದೆಯವರಿಗೆ ಗೊತ್ತಿದೆ ಎನ್ನುತ್ತಾರೆ. ಈ ದಾವೆಯನ್ನು ವಾದಿಯವರು ಹೂಡಿದ ನಂತರ ಕಂದಾಯ ಇಲಾಖೆಯಲ್ಲಿ ಹೋಗಿ ಯಾವ ರೀತಿ ದಾವಾ ಆಸ್ತಿಯು ನನ್ನ ತಂದೆಯವರಿಗೆ

ಬಂದಿರುತ್ತದೆ ಎಂದು ವಿಚಾರಿಸಿದ್ದೇನಾ ಎಂದರೆ ಇಲ್ಲ. ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ನಿಡಿ1 ಕ್ರಯ ಪತ್ರ ಆಗುವ ಮೊದಲು ಅದು ನನ್ನ ತಂದೆಯವರಾದ ಗುರುವಾರೆಡ್ಡಿ ರವರ ಹೆಸರಿನಲ್ಲಿ ಪಹಣಿ ಏನಾದರೂ ಇತ್ತಾ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಯಾವತ್ತೂ ಸಹ ಗುರುವರೆಡ್ಡಿರವರು ಸ್ವಾದೀನತೆಯನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ.

4. ಸದರಿ ನನ್ನ ತಂದೆಯವರು ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಬೇರೆಯವರಿಂದ ಗೇಣಿದಾರರಾಗಿ ಸ್ವಾದೀನದಲ್ಲಿ ಏನಾದರೂ ಇದ್ದಾರಾ ಎಂದರೆ ಸಾಕ್ಷಿಯು ನಾನು ಕೆಜಿಎಫ್ ಟೌನಿನಲ್ಲಿ ವಾಸ ಮಾಡುವ ಕಾರಣ ಹಾಗೂ ನನ್ನ ತಂದೆಯವರು ಹಳ್ಳಿಯಲ್ಲಿ ಇರುವ ಕಾರಣ ನನಗೆ ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಈ ದಾವೆ ಹೂಡಿದ ನಂತರ ದಾವಾ ಆಸ್ತಿಯ ಬಗ್ಗೆ ತಿಳಿದುಬಂದಿರುತ್ತದೆ ಎನ್ನುತ್ತಾರೆ. ನನ್ನ ತಂದೆಯವರಾಗಲೀ, ನಾವಾಗಲೀ, ಯಾವತ್ತೂ ಸಹ ದಾವಾ ಆಸ್ತಿಯ ಸಾವದೀನೆತಯನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ನಿಡಿ1 ನ್ನು ಮಾಡುವ ಸಂದರ್ಬದಲ್ಲಿ ವಾದಿಯವರ ತಾಯಿಯವರಾದ ಎವಲಿನ್ ಎಲಿಜಿಬತ್ ಅಪ್ಲೆಟಾನ್ ಮರಣ ಹೊಂದಿದ್ದು ಆ ವಿಚಾರ ಗೊತ್ತಿದ್ದು ನನ್ನ ತಂದೆಯವರು ಮೊದಲನೇ ಪ್ರತಿವಾದಿಯನ್ನು ಕರೆದುಕೊಂಡು ಹೋಗಿ ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದ ಪಟ್ಟಂತೆ 1ನೇ ಪ್ರತಿವಾದಿಗೆ ಯಾವುದೇ ದಾಖಲೆಗಳನ್ನು ಮಾಡಿಕೊಡುವ ಹಕ್ಕು ಇರಲಿಲ್ಲ ಮತ್ತು ಅವರು ದಾವಾ ಆಸ್ತಿಯ ಸ್ವಾದೀನತೆಯನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿ 1ನೇ ಪ್ರತಿವಾದಿಗೆ ನನ್ನ ಪ್ರಕಾರ ದಾವಾ ಆಸ್ತಿ ಯಾವ ರೀತಿ ಬಂತು ಎಂದು ನಾನು ತಿಳಿದುಕೊಂಡಿದ್ದೇನಾ ಎಂದರೆ ನನಗೆ ಗೊತ್ತಿಲ್ಲ.

5. ನಾನು ಯಾವತ್ತೂ ಸಹ 1ನೇ ಪ್ರತಿವಾದಿಯನ್ನು ಬೇಟಿ ಮಾಡಿರುವುದಿಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಹೂಡಿದ ನಂತರ ನಾವು ಬಿ ಷೆಡ್ಯೂಲ್ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿದ್ದು ಈಗಲೂ ಸಹ ವಾದಿಯವರು ಸಿ ಷೆಡ್ಯೂಲ್ ಆಸ್ತಿಯ ಸ್ವಾದೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಡಿ1 ಕ್ರಯ ಪತ್ರದ 2ನೇ ಪುಟವನ್ನು ತೋರಿಸಲಾಗಿ ಅದರಲ್ಲಿ ಕಾಣುವ ಬಾವ ಚಿತ್ರದ ವ್ಯಕ್ತಿಯೇ ನನ್ನ ಪ್ರಕಾರ 1ನೇ ಪ್ರತಿವಾದಿ ಆಗಿದ್ದು ಅವರು ನನ್ನ ತಂದೆಯವರಿಗೆ ಸದರಿ ದಾಖಲೆಯನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಹೌದು. ನಾನು ಇಲ್ಲಿಯವರೆಗೆ ವಾದಿಯವರು ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ಕೇಳಿ ತಿಳಿದುಕೊಂಡಿರುವುದಿಲ್ಲ. ಈಗಲೂ ಸಹ ವಾದಿಯವರೇ ದಾವಾ ಆಸ್ತಿಯಲ್ಲಿ ಸ್ವಾದೀನತೆಯನ್ನು ಹೊಂದಿದ್ದು ನಮಗೆ ಯಾವುದೇ ಹಕ್ಕು ಸ್ವಾದೀನ ಇ ಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

ಓದಿ ಹೇಳಿ ಕೇಳಿ ಸರಿ ಇದೆ

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**